ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, the 30th June 1972/Ashadha 9, 1894 (S. E.)

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

Harijan Colonies

15. **Sri M. B. RAMASWAMY** (Anekal).—

Will the Minister for Community Development and Social Welfare be pleased to state:—

(*a*) the names of places where Harijan Colonies are proposed to be established ;

(*b*) the names of such places where houses have already been constructed for Harijans ;

(*c*) the names of such places where houses for Harijans have not been constructed so far ;

(*d*) the amount invested on each of these colonies ;

(*e*) the reasons for delay in construction of houses in some of these colonies ?

Sri M. MALLIKARJUNA SWAMY (Minister for Community Development and Social Welfare).—

(*a*) There is no scheme at present to establish Harijan Colonies.

(*b*) Does not arise in view of the reply to clause (*a*).

(*c*) Does not arise in view of the reply to clause (*b*).

(*d*) Do.

(*e*) Do.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ ತಾವು ನನ್ನ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಹರಿಜನ ಕಾಲೋನಿಗಳನ್ನು ಕಟ್ಟಿಸುವ ಯೋಜನೆ ಇಲ್ಲ ಎಂದು ಹೇಳಿದ್ದೀರಿ, ನಾನು ಕೇಳಿದ್ದು ಹಿಂದೆ ಕೆಲವು ಹರಿಜನ ಕಾಲೋನಿಗಳನ್ನು ಕಟ್ಟಬೇಕೆಂದು ಸರ್ಕಾರದವರು ಪ್ರಪ್ರೋಜ್ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ನಾನು ಈ ಪ್ರಶ್ನೆಯನ್ನು ಕೇಳಿದ ಮೇಲೆ ಈ ಬಗ್ಗೆ ಕ್ಯಾಬಿನೆಟ್‌ನಲ್ಲಿ ಡಿಸಿಷನ್ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ದಯವಿಟ್ಟು ವಿಶದವಾಗಿ ತಿಳಿಸುತ್ತೀರಾ ?

Sri M. MALLIKARJUNASWAMY.—Almost every village has its Harijan Colony.

ಶ್ರೀ ಎಂ. ಬಿ. ರಾಮಸ್ವಾಮಿ.—ಈಗ ಈ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕೊಟ್ಟ ಉತ್ತರ ನಮಂಜಸವಾಗಿಲ್ಲ. ಹರಿಜನ ಕಾಲೋನಿಗಳನ್ನು ಕಟ್ಟಬೇಕಾದರೆ ಏನೇನು ವ್ಯವಸ್ಥೆ ಮಾಡಿದ್ದೀರಿ, ಎಷ್ಟು ಸೈಟುಗಳನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದು ನಾನು ಅರ್ಥಮಾಡಿಕೊಂಡಿರುವ ಹಾಗೆ ನಮ್ಮ ಇರಾಖೆಯಲ್ಲಿ ಹರಿಜನರ ಅಗ್ರಿಕಲ್‌ಚರಲ್ ಕಾಲೋನೀ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಈಗ ನಮ್ಮ ಇರಾಖೆಯಲ್ಲಿ ಹರಿಜನ ಅಗ್ರಿಕಲ್‌ಚರಲ್ ಕಾಲೋನಿಗಳನ್ನು ಮಾಡುವುದಕ್ಕೆ ಯಾವ ಯೋಜನೆಯೂ ಇಲ್ಲ. ಹಿಂದೆ 100 ಅಗ್ರಿಕರ್‌ಚರಲ್ ಕಾಲೋನಿಗಳನ್ನು ಮಾಡಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಅಗ್ರಿಕಲ್ಚರಲ್ ಕಾಲೋನಿಗಳನ್ನು ಒಂದು, ಎರಡು ಮತ್ತು ಮೂರನೆಯ ಪಂಚವಾರ್ಷಿಕಯೋಜನೆಯಲ್ಲಿ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮಿನಲ್ಲಿ ಸ್ಥಾಪನೆ ಮಾಡುವುದು ಇತ್ತು, ನಾಲ್ಕನೆಯ ಪಂಚವಾರ್ಷಿಕಯೋಜನೆ ಬಂದಮೇಲೆ ಆ ಸ್ಕೀಮನ್ನು ಎಂ.ಸಿ.ಆರ್.ಪಿ. ಯೋಜನೆಯೆಂದು ಬದಲಾಯಿಸಿ ಬೇರೆ ಹೆಸರಿನ ಅಗ್ರಿಕಲ್ಚರಲ್ ಕಾಲೋನಿ ಮಾಡಿ ಹಿಂದೆ ಇದ್ದ ಸ್ಕೀಮನ್ನು ರದ್ದು ಮಾಡಿದ್ದಾರೆ ಅಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗ 9 ಮಲ್ಟಿಪರ್ಪಸ್ ಕೋ-ಆಪರೇಟಿವ್ ರಿಹ್ಯಾಬಿಲಿಟೇಷನ್ ಪ್ರಾಜೆಕ್ಟ್ ಎಂದು ಹರಿಜನರಿಗಾಗಿ ಇವೆ ಅವುಗಳ ಮುಖೇನ ಯಾರು ನ್ಯಾಚುರಲ್ ಕೆರಾಮಿಟೀಸಿಗೆ ತುತ್ತಾಗಿರುತ್ತಾರೆ ಅಂಥವರಿಗೆ 700 ರೂಪಾಯಿಗಳನ್ನು ನಾವು ಕೊಡುತ್ತಿದ್ದೇವೆ. ಇದರ ಜೊತೆಗೆ 200 ರೂಪಾಯಿಗಳ ಫ್ರೀ ಟಿಂಬರ್ ಕೊಡುತ್ತೇವೆ. ಹಿಂದೆ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮಿನಲ್ಲಿ ಕಾಲೋನಿಗಳನ್ನು ಕಟ್ಟಿಸಲಾಗುತ್ತಿತ್ತು, ಆ ಯೋಜನೆ ಈಗ ಇಲ್ಲ.

ಶ್ರೀ ಸಿ. ಬೈರೇಗೌಡ.—ಕೋಲಾರ ಜಿಲ್ಲೆಯಲ್ಲಿ ನರಸಾಪುರದಲ್ಲಿ ಪ್ರತ್ಯೇಕವಾದ ಒಂದು ಹರಿಜನ ಕಾಲೋನಿಯನ್ನು ಮಾಡಿ ಅದರಲ್ಲಿ 100 ಚಿಲ್ಲರೆ ಮನೆಗಳನ್ನು ಕಟ್ಟಲಾಗಿತ್ತು. ಆ ಮನೆಗಳಲ್ಲಿ 70-80 ಮನೆಗಳು ಬಿದ್ದು ಹೋಗಿವೆ. ಅವನ್ನು ಪುನಃ ಕಟ್ಟಿಸುವುದಕ್ಕಾಗಿ ಒಂದು ಲಕ್ಷ ಚಿಲ್ಲರೆ ರೂಪಾಯಿಗಳ ಎಸ್ಟಿಮೇಟ್ ಮಾಡಿ ಅದನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಆ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಂಥಾ ಮನೆಗಳನ್ನು ಕಟ್ಟುವುದಕ್ಕೆ ಅವಕಾಶ ಇಲ್ಲ. ಅದು ಸರ್ಕಾರಕ್ಕೆ ಬಂದಿದ್ದರೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

Sri DIGAMBAR RAO BALWANT RAO.—Is it not improper to have any separate Harijan Colony as such, in to-day's India, Sir ? Is there any proposal to have Harijan Colonies as such away from the villages ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗ ಪ್ರತ್ಯೇಕವಾದ ಹರಿಜನ ಕಾಲೋನಿಗಳು ಇಲ್ಲ.

ಶ್ರೀ ಬಿ. ಬೈರಪ್ಪಾಜಿ.—ದೇಶದಲ್ಲಿ ಕೆಲವು ಸ್ಥಳಗಳಲ್ಲಿ ಹೆಚ್ಚು ಹರಿಜನರಿದ್ದಾರೆ. ಅವರಿಗೆ ವಸತಿಸೌಕರ್ಯವನ್ನು ಒದಗಿಸುವುದು ಅವಶ್ಯಕ. ಆದ್ದರಿಂದ ಅವರಿಗೆ ಪ್ರತ್ಯೇಕವಾದ ಕಾಲೋನಿಗಳನ್ನು ಮಾಡುವುದಕ್ಕೆ ಬದಲಾಗಿ ಎಲ್ಲಾ ಸವರ್ಣೀಯರನ್ನೂ ಜೊತೆಗೆ ಸೇರಿಸಿಕೊಂಡು ಕಾಲೋನಿ ಮಾಡತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ. —5ನೇ ಪಂಚವಾರ್ಷಿಕ ಯೋಜನೆಯಲ್ಲಿ ಮೊದಲನೆಯ 3 ವರ್ಷಗಳ ಕಾಲ ಸರ್ಕಾರದವರು 5 ಲಕ್ಷ ಸೈಟುಗಳನ್ನು ಲ್ಯಾಂಡ್‌ಲೆಸ್ ಅಗ್ರಿಕಲ್‌ಚರರ್ ಲೇಬರರ್ಸ್ ಮತ್ತು ಹರಿಜನರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಅದನ್ನು ಕಾಂಪ್ರೋ ಹೌಸಿಂಗ್ ಕಾಲೋನಿ ಮಾಡಬೇಕೆಂದು ಈಗಾಗಲೇ ನಾವು ತೀರ್ಮಾನ ಮಾಡಿದ್ದೇವೆ.